## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.503/2024

| | | |
|---|---|---|
| ಸಾಕ್ಷಿದಾರರ ಹೆಸರು | ಅಕ್ತರ್ ಜಾನ್ | ಸಿ.ಡಬ್ಲ್ಯು–3 |
| ಗಂಡನ ಹೆಸರು | ಇಸ್ಮಾಯಿಲ್ ಸಾಬ್ | ಪಿ .ಡಬ್ಲ್ಯೂ–3 |
| ವಯಸ್ಸು | 44 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಗೃಹಿಣಿ | ದಿನಾಂಕಃ |
| ವಾಸಃ | ಸಾಗರ | 28.07.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 2 ನನ್ನ ಚಿಕ್ಕಮ್ಮ. ಚಾ.ಸಾ 1 ಚಾ.ಸಾ 2 ರವರ ಮಗಳು. ಚಾ.ಸಾ 4 ನನಗೆ ಗೊತ್ತು. 1 ನೇ ಆರೋಪಿತನು ಚಾ.ಸಾ 1 ರವರ ಗಂಡ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿತನ ಸಂಬಂಧಿಕರು.

**2.** ದಿನಾಂಕ 06.01.2019 ರಂದು ಚಾ.ಸಾ 1 ರವರ ವಿವಾಹವು 1 ನೇ ಆರೋಪಿತನೊಂದಿಗೆ ನಡೆಯಿತು. ಕೆಲವು ದಿನಗಳ ನಂತರ ಚಾ.ಸಾ 1 ಮತ್ತು 1 ನೇ ಆರೋಪಿತನ ನಡುವೆ ಮನೆಯ ವಿಚಾರದಲ್ಲಿ ಮನಸ್ತಾಪ ಉಂಟಾಯಿತು. ಈ ಕುರಿತು ನಾವು ಅವರಿಗೆ ತಿಳುವಳಿಕೆ ಹೇಳಿ ಬಂದಿದ್ದೇವೆ. ಈ ಪ್ರಕರಣದ ಕುರಿತು ನನಗೆ ಬೇರೆ ಮಾಹಿತಿ ಇಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**3.** ಮದುವೆಯಾದ ನಂತರ ಸುಮಾರು 4 ತಿಂಗಳವರೆಗೆ 1 ನೇ ಆರೋಪಿತನು ಚಾ.ಸಾ 1 ರವರನ್ನು ಚೆನ್ನಾಗಿ ನೋಡಿಕೊಂಡಿದ್ದು, ಆನಂತರ ಅವಳಿಗೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡಿ ಮದುವೆ ಸಮಯದಲ್ಲಿ ಬೈಕ್ ಹಾಗೂ ಇತರೆ ವಸ್ತುಗಳನ್ನು ಕೊಡಿಸಿಲ್ಲ ಎಂದು ಗಲಾಟೆ ಮಾಡುತ್ತಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿತನ ಬೇಡಿಕೆಯಂತೆ ಬಂಗಾರದ ಆಭರಣಗಳನ್ನು ಅಡಮಾನ ಮಾಡಿ

ಫ್ರಿಡ್ಜ್, ವಾಷಿಂಗ್ ಮೆಶಿನ್ ಹಾಗೂ ಬೈಕನ್ನು ನಾವು ಕೊಡಿಸಿದ್ದೇವೆ ಎನ್ನುವುದು ಸರಿಯಲ್ಲ. ಚಾ.ಸಾ 1 ರವರು ಗರ್ಭಿಣಿಯಾಗಿದ್ದಾಗ ಅವಳ ಯೋಗಕ್ಷೇಮವನ್ನು ಮಾಡದೇ ಮನೆ ಕೆಲಸವನ್ನು ಆರೋಪಿತರು ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ಚಾ.ಸಾ 1 ರವರಿಗೆ ಹೆರಿಗೆಯಾಗಿದ್ದಾಗ 40 ದಿನಗಳ ಕಳೆದರೂ ಸಹ 1 ನೇ ಆರೋಪಿತನು ಅವಳನ್ನು ನೋಡಲು ಬರಲಿಲ್ಲ ಎನ್ನುವುದು ಸರಿಯಲ್ಲ. ಚಾ.ಸಾ 1 ರವರು 1 ನೇ ಆರೋಪಿತನ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಈ ಮಧ್ಯೆ 1 ನೇ ಆರೋಪಿತನು ಬೇರೆ ಮದುವೆಯಾಗಿದ್ದಾನೆ ಎಂದು ತಿಳಿದಾಗ ದಿನಾಂಕ 30.03.2023 ರಂದು ನಾನು, ಚಾ.ಸಾ 1 ಮತ್ತು 2 ರವರು 1 ನೇ ಆರೋಪಿತನ ಮನೆಗೆ ಹೋಗಿ ವಿಚಾರಿಸಿದಾಗ ಚಾ.ಸಾ 1 ರವರಿಗೆ 1 ನೇ ಆರೋಪಿತನು ಕೈಗಳಿಂದ ಹಲ್ಲೆ ಮಾಡಿದನು ಎಂದರೆ ಸರಿಯಲ್ಲ. ನಂತರ ದಿನಾಂಕ 01.04.2023 ರಂದು 1 ನೇ ಆರೋಪಿತನು ಅಕ್ರಮವಾಗಿ ನಮ್ಮ ಮನೆಯ ಒಳಗೆ ನುಗ್ಗಿ ಚಾ.ಸಾ 1 ರವರಿಗೆ ಬೈಯ್ದು ಕೈಯಿಂದ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದಾನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾ.ಸಾ 1 ರವರು ನೀಡಿರುವ ದೂರಿನ ಮೇರೆಗೆ ದಿನಾಂಕ 12.07.2023 ರಂದು ಈಗ ಓದಿ ಹೇಳಿದಂತೆ ನನ್ನ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ–10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ. ಎಂ.ಜೆಡ್ ರವರಿಂದಃ–**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.